ಯೆಲ್ಲಕ್ಕೂ ದೊಡ್ಡದೆನಿಸುತ್ತದೆ. ಆದರೂ ಆಶ್ರಯವಿಲ್ಲದ್ದರಿಂದ ಅದು ಆಗಾಗ್ಗೆ ಲಯ ಹೊಂದುವ ಸ್ಥಿತಿಗೆ ಬರುತ್ತಿರುತ್ತವೆ.

ಬೆಳಗಾವೀ ಜಿಲ್ಲೆಯಲ್ಲಿ ೨ ಪುಸ್ತಕಾಲಯಗಳೂ ೭ ವಾಚನಗೃಹಗಳೂ ಇದ್ದವು. ಬೆಳಗಾವಿಯಲ್ಲಿಯ ೨ ಪುಸ್ತಕಾಲಯಗಳು ಸನ್ ೧೮೪೮ರಲ್ಲಿ ಹುಟ್ಟಿದವು; ಉಳಿದ ೭ ವಾಚನಗೃಹಗಳು ಚಿಕ್ಕೋಡಿ, ನಿಪಾಣಿ, ಗೋಕಾವಿ, ಅಥಣಿ, ಸಂಪಗಾವಿ, ಖಾನಾಪುರ, ಸವದತ್ತಿಗಳಲ್ಲಿ ಕ್ರಮವಾಗಿ ೧೮೬೬, ೧೮೬೫, ೧೮೬೫, ೧೮೬೬, ೧೮೭೦ ಈ ವರ್ಷಗಳಲ್ಲಿ ಆರಂಭವಾದವು.

ವಿಜಾಪುರ ಜಿಲ್ಲೆಯಲ್ಲಿ ಸದರೀ ವರ್ಷದಲ್ಲಿ ಬಾಗಲಕೋಟೆ, ಬಾಗೇವಾಡಿ, ಬೀಳಗಿ, ವಿಜಾಪುರ, ಇಂಡಿ, ಕಲಾದಗಿ, ಮುದ್ದೇಬಿಹಾಳಗಳಲ್ಲಿ ಪುಸ್ತಕಾಲಯಗಳು ಅಥವಾ ವಾಚನಗೃಹಗಳು ಇದ್ದವು.

ಕಾನಡಾ ಜಿಲ್ಲೆಯಲ್ಲಿ ಸನ್ ೧೮೮೧-೮೨ರಲ್ಲಿ ಕಾರವಾಡ (೧೮೬೪), ಶಿರಸಿ (೧೮೭೦), ಕುಮಟಾ (೧೮೭೫), ಹಲ್ಯಾಳ, ಈ ನಾಲ್ಕು ಗ್ರಾಮಗಳಲ್ಲಿ ಪುಸ್ತಕಾಲಯಗಳಿದ್ದವು. ಕಾರವಾಡದ ಪುಸ್ತಕಾಲಯದಲ್ಲಿ ಪದಾರ್ಥ ಸಂಗ್ರಹಾಲಯವೂ ಇರುತ್ತದೆ. ಈ ಪುಸ್ತಕಾಲಯದಲ್ಲಿ ಸದರೀ ವರ್ಷ ೧೭೦೯ ಪುಸ್ತಕಗಳಿದ್ದವು. ಆದ್ದರಿಂದ ಕಾರವಾಡದ ಪುಸ್ತಕಾಲಯವು ನಾಲ್ಕೂ ಜಿಲ್ಲೆಗಳಲ್ಲಿ ಮೇಲಾದದ್ದೆಂದು ಹೇಳಬಹುದು.

ಧಾರವಾಡ ಹುಬ್ಬಳ್ಳಿಗಳಲ್ಲಿ ವೊಂದೊಂದು ಹೊಲಿಯರ ಶಾಲೆಗಳುಂಟು. ಮೊದಲನೇದರಲ್ಲಿ ೧೫೦ ಜನ ವಿದ್ಯಾರ್ಥಿಗಳೂ ಯೆರಡನೇದರಲ್ಲಿ ೫೦ ಜನ ವಿದ್ಯಾರ್ಥಿಗಳೂ ಸದರೀ ವರ್ಷದಲ್ಲಿ ಕಲಿಯುತ್ತಿದ್ದರು. ಈ ಶಾಲೆಗಳಲ್ಲದೆ ಧಾರವಾಡ ಜಿಲ್ಲೆಯಲ್ಲಿ ವೊಟ್ಟಿಗೆ ೧೫೦ ಜನ ನೀಚ ಜಾತಿಗಳ ಹುಡುಗರು ಉತ್ತಮರ ಶಾಲೆಗಳಲ್ಲಿ ಬೇರೆ ಕೂತು ಸದರೀ ವರ್ಷದಲ್ಲಿ ಕಲಿಯುತ್ತಿದ್ದರು.

# ೧೩ನೇ ಭಾಗ.

## ಆರೋಗ್ಯವು.

ರೋಗಗಳು.—ಧಾರವಾಡ ಜಿಲ್ಲೆಯ ಹವೆಯು ವಾಡಿಕೆಯಾಗಿ ಆರೋಗ್ಯದ್ದಿರುತ್ತದೆ. ಸನ್ ೧೮೬೨ನೇ ವರ್ಷ, ಅಂದರೆ ಕಾನಡಾ ಜಿಲ್ಲೆಯು ಮುಂಬಯಿ ಇಲಾಖೆಗೆ ಸೇರಿದ ವರ್ಷ, ಆ ಜಿಲ್ಲೆಯಿಂದ ಚಳಿ ಜ್ವರವು ಧಾರವಾಡ ಜಿಲ್ಲೆಗೆ ಬಂತು. ಮೊದಲು ನಾಲ್ಕೆಂಟು ವರ್ಷ ಚಳಿ ಜ್ವರದಿಂದ ಬಹು ಜನರು ಮರಣ ಹೊಂದಿದರು. ಪಟಕೀ ಬೇನೆಯು ಈ ಜಿಲ್ಲೆಯಲ್ಲಿ ಆಗಾಗ್ಗೆ ಬರುತ್ತಿರುತ್ತದೆ; ಆದರೆ ಅದು ಪಶ್ಚಿಮದ ತಾಲೂ

ಕುಗಳಲ್ಲಿ ಉಗ್ರವಾದದ್ದಿರುವದಿಲ್ಲ. ಆದರೂ ಸನ್ ೧೮೧೮, ೧೮೬೫-೬೬, ೧೮೬೯, ೧೮೭೭, ಈ ವರ್ಷಗಳಲ್ಲಿ ಹುಬ್ಬಳ್ಳಿ ಧಾರವಾಡಗಳಲ್ಲಿ ಪಟಕಿಯಿಂದ ಅಸಂಖ್ಯ ಜನರು ಮರಣ ಹೊಂದಿದರು. ಬೇಸಿಗೆಯಲ್ಲಿ ಮೈಲೆಯ ಪಿಡುಗು ವಾಡಿಕೆಯಾಗಿ ಬರುತ್ತವೆ. ಅದೇ ಕಾಲಕ್ಕೆ ನಾರಿನ ಉಪದ್ರವವಾದರೂ ಹೆಚ್ಚಾಗಲಿ ಕಡಿಮೆಯಾಗಲಿ ಆಗುತ್ತಿರುತ್ತದೆ.

ಬೆಳಗಾವಿಯು ಸಮುದ್ರದ ಸಪಾಟಿಗಿಂತ ಸುಮಾರು ೨೦೦೦ ಫೂಟು ಯೆತ್ತರವಿರುವ ಕಾರಣ ಅಲ್ಲಿಯ ಹವೆಯು ಬಹು ತಣ್ಣಗಾಗಿ, ಯುರೋಪಿಯನ್ ಜನರಿಗೆ ಆರೋಗ್ಯಕರವಿರುತ್ತದೆ. ಆದರೆ ಅಶಕ್ತ ಮನುಷ್ಯರಿಗೆ ಜೂನಿನಲ್ಲಿ ಬರುವ ಶೈತ್ಯದಿಂದ ನೆಗಡಿ, ತಲೆಶೂಲೆ, ವಾತ, ಯಕೃತ್‍ಪ್ಲೀಹ, ಮುಂತಾದ ರೋಗಗಳಾಗುತ್ತವೆ. ಪಶ್ಚಿಮದ ತಾಲೂಕುಗಳಲ್ಲಿ ಹವೆಯ ಜ್ವರವು ಆಗಾಗ್ಗೆ ಬರುತ್ತಿದ್ದಾಗ್ಯೂ ಅದು ಬಹಳ ಉಗ್ರವಿರುವದಿಲ್ಲ. ಬೇಸಿಗೆಯಲ್ಲಿಯೂ ಚಳಿಗಾಲದಲ್ಲಿಯೂ ಮೈಲಿ, ಗೊಬ್ಬರ ಗಣಜಲಿಗಳ ಉಪದ್ರವು ವಾಡಿಕೆಯಾಗಿ ಆಗುತ್ತದೆ. ಅಥಣಿ, ಗೋಕಾವೀ ತಾಲೂಕುಗಳಲ್ಲಿ ಪಟಕೀ ಬೇನೆ ಉಗ್ರವಿದ್ದಷ್ಟು ಪಶ್ಚಿಮದ ತಾಲೂಕುಗಳಲ್ಲಿ ಇರುವದಿಲ್ಲ. ವಾಡಿಕೆಯಾಗಿ ಪಶ್ಚಿಮದ ತಾಲೂಕುಗಳಲ್ಲಿ ಜ್ವರದ ಬಾಧೆ ಹೆಚ್ಚೆಂತಲೂ ಪೂರ್ವದ ತಾಲೂಕುಗಳಲ್ಲಿ ಪಟಕಿಯ ಉಪದ್ರವ ಹೆಚ್ಚೆಂತಲೂ ಹೇಳ ಬಹುದು.

ವಿಜಾಪುರ ಜಿಲ್ಲೆಯಲ್ಲಿ ಮುದ್ದೇಬಿಹಾಳ, ಬಾದಾವಿ, ಈ ಯೆರಡು ತಾಲೂಕುಗಳಲ್ಲಿ ಚಳಿಗಾಲದಲ್ಲಿ ಜ್ವರದ ಉಪದ್ರವವು ಬಹಳ ಆಗುತ್ತದೆ; ವಿಜಾಪುರ, ಬಾಗೇವಾಡೀ ತಾಲೂಕುಗಳಲ್ಲಿಯೂ ಆಗ ಜ್ವರೋಪದ್ರವವು ವೊಳಿತಾಗಿ ಆಗುತ್ತದೆ. ಚಳಿ ಕಡಿಮೆ ಇದ್ದ ತಾಲೂಕುಗಳಲ್ಲಿ ವಾಡಿಕೆಯಾಗಿ ಬೇಸಿಗೆಯಲ್ಲಿ ಪಟಕಿಯ ಪಿಡುಗು ಬಂದರೆ ಬಹು ಜನರನ್ನು ವೊಯ್ಯುತ್ತದೆ. ಇವಲ್ಲದೆ ವಾತರೋಗ, ನಾರು, ಮೈಲೆ, ಗೊಬ್ಬರ, ಇವಾದರೂ ಆಗಾಗ್ಗೆ ಬರುತ್ತವೆ.

ಪಟಕಿಯ ಬಗ್ಗೆ ಜನರು ಹೇಳುವದೊಂದು ಕಥೆ ಹ್ಯಾಗಂದರೆ—ವಿಜಾಪುರದ ಬಾದಶಾಹಿಯನ್ನು ಸ್ಥಾಪಿಸಿದ ಅದಿಲ್‍ಶಹನು ಮಾಂತ್ರಿಕನಿದ್ದು, ಪಟಕಿ, ಮೈಲೆ, ಜ್ವರ, ಮುಂತಾದ ರೋಗಗಳನ್ನು ಭದ್ರವಾಗಿ ಕಟ್ಟಿಸಿದ್ದೊಂದು ಮನೆಯೊಳಗೆ ಶರೆ ಹಾಕಿದ್ದನು. ಆ ಮನೆಗೆ ಕಿಡಿಕಿಗಳೂ ಬಾಗಿಲೂ ಸಹ ಇದ್ದಿಲ್ಲ. ಸನ್ ೧೮೧೮ನೇ ವರ್ಷದಲ್ಲಿ ಇಂಗ್ಲಿಷ ಸರಕಾರದ ಅಮಲು ಬಂದ ಬಳಿಕ ವೊಬ್ಬ ಸಾಹೇಬನು, ಆ ರೋಗಗಳ ಶರೆಮನೆಯಲ್ಲಿ ಬಾದಶಹನು ಬಹಳ ಹಣವಿಟ್ಟು, ಯಾರೂ ಅದಕ್ಕೆ ಕೈ ಹಚ್ಚ ಬಾರದೆಂದು ರೋಗಗಳ ಶರೆಮನೆಯೆಂಬ ಹೆಸರು ಅದಕ್ಕೆ ಇಟ್ಟಿರ ಬಹುದೆಂದು ಯೆಣಿಸಿ, ಆ ಮನೆಯ ಗೋಡೆಯನ್ನು ವೊಡಿಸಿದನು. ಅದರಿಂದ ಪಟಕಿಯು ತತ್ಕಾಲಕ್ಕೆ ದೇಶದ ತುಂಬ ಹಬ್ಬಿ, ಧಾರವಾಡ, ಹುಬ್ಬಳ್ಳಿ, ವಿಜಾಪುರ, ಮುಂತಾದ ಕಡೆಯಲ್ಲಿ ಅದೇ ವರ್ಷ ಅಸಂಖ್ಯ ಜನರು ಸತ್ತರು.

ಕಾನಡಾ ಜಿಲ್ಲೆಯು ವಾಡಿಕೆಯಾಗಿ ರೋಗಕಾರಕವೆಂದು ಹೇಳ ಬಹುದು. ಆದ ರೂ ಘಟ್ಟದ ಮೇಲಿನ ಪ್ರದೇಶದಲ್ಲಿ ಜ್ವರ ಮುಂತಾದ ರೋಗಗಳ ಉಪದ್ರವಿದ್ದಷ್ಟು ಘಟ್ಟದ ಕೆಳಗೆ ಇರುವದಿಲ್ಲ. ಮಳೆಗಾಲದ ಆರಂಭದಲ್ಲಿಯೂ ಚಳಿಗಾಲದಲ್ಲಿಯೂ ಘಟ್ಟದ ಮೇಲೆ ಜ್ವರೋಪದ್ರವು ಬಹಳ ಆಗಿ, ಜನರು ಸಾಯುತ್ತಾರೆ. ಜ್ವರ, ಪಟಕಿ, ಮೈಲೆ ಇವು ವೊಂದರ ಹಿಂದೊಂದು ಕ್ರಮವಾಗಿ ಬರುತ್ತವೆಂದು ಅನುಭವವುಳ್ಳ ಜನರು ಹೇಳಿ ಅದರಂತೆ ಹಿಂದಿನ ದೃಷ್ಟಾಂತಗಳನ್ನು ತೋರಿಸುತ್ತಾರೆ. ಮೈಲೆ ಇದ್ದಾಗ ಪಟಕಿ ಬಂತೆಂದರೆ ಮೈಲೆ ಅದೃಶ್ಯವಾಗುತ್ತದೆ. ಪಟಕಿ ಬಂದು ಹೋಗಿ ೨, ೩ ವರ್ಷಗಳ ನಂತರ ಜ್ವರ ಬರುತ್ತದೆ; ಅದರ ಹಿಂದೆ ಮೈಲೆ ಬರುತ್ತದೆ. ಇವಲ್ಲದೆ ಘಟ್ಟದ ಮೇಲಿನ ಪ್ರದೇಶದಲ್ಲಿ ಅತಿಸಾರ, ಪ್ಲೀಹ, ಕಾಮಿಣಿ, ಉದರ, ಈ ರೋಗಗಳು ಆಗಾಗ್ಗೆ ಬರುತ್ತವೆ.

ಆಸಪತ್ರಿಗಳು.—ಧಾರವಾಡ ಜಿಲ್ಲೆಯಲ್ಲಿ ಧಾರವಾಡ, ಹುಬ್ಬಳ್ಳಿ, ಗದಗು, ಹಾವೇರಿ ಈ ನಾಲ್ಕು ಗ್ರಾಮಗಳಲ್ಲಿ ಸರಕಾರೀ ಆಸಪತ್ರಿಗಳುಂಟು. ಇವು ಕ್ರಮವಾಗಿ ಸನ್ ೧೮೩೦, ೧೮೫೯, ೧೮೬೪, ೧೮೭೮ ಈ ವರ್ಷಗಳಲ್ಲಿ ಆರಂಭವಾದವು. ಸನ್ ೧೮೮೨ನೇ ವರ್ಷ ಈ ನಾಲ್ಕೂ ಆಸಪತ್ರಿಗಳಲ್ಲಿ ಕೂಡಿ ೪೪೩೦೭ ಜನ ರೋಗಿಗಳಿಗೆ ಔಷಧೋಪಚಾರವಾಯಿತು. ಇವುಗಳ ಖರ್ಚು ಆ ವರ್ಷ ೨೫೬೫೦ ರೂಪಾಯಿ ಆಯಿತು.

ಬೆಳಗಾವೀ ಜಿಲ್ಲೆಯಲ್ಲಿ ಸನ್ ೧೮೮೨ನೇ ವರ್ಷ ಬೆಳಗಾವಿಯಲ್ಲಿ ೨, ಗೋಕಾವಿ, ಅಥಣಿ, ಸವದತ್ತಿ, ಚಿಕ್ಕೋಡೀ, ಈ ಗ್ರಾಮಗಳಲ್ಲಿ ವೊಂದೊಂದು ಆಸಪತ್ರಿಗಳಿದ್ದವು. ಬೆಳಗಾವಿಯ ದೊಡ್ಡ ಸಿವಿಲ್ ಆಸಪತ್ರಿ ಸನ್ ೧೮೩೬ರಲ್ಲಿ ಆರಂಭವಾಯಿತು; ಅಲ್ಲಿಯ ಯೆರಡನೇ ಸಣ್ಣ ಆಸಪತ್ರಿಯೂ ಗೋಕಾವೀ ಅಥಣಿ, ಸವದತ್ತಿ, ಚಿಕ್ಕೋಡಿಗಳಲ್ಲಿಯ ಆಸಪತ್ರಿಗಳೂ ಕ್ರಮವಾಗಿ ಸನ್ ೧೮೫೯, ೧೮೬೭, ೧೮೭೧, ೧೮೭೫, ೧೮೮೨ ಈ ವರ್ಷಗಳಲ್ಲಿ ಆರಂಭವಾದವು. ಇವುಗಳಲ್ಲೆಲ್ಲ ಕೂಡಿ ಸನ್ ೧೮೮೨ನೇ ವರ್ಷ ೨೧೩೨೭ ರೋಗಿಗಳಿಗೆ ಔಷಧೋಪಚಾರವಾಯಿತು. ಇವುಗಳ ಖರ್ಚು ಆ ವರ್ಷ ೧೯೦೯೦ ರೂಪಾಯಿಯಾಯಿತು.

ವಿಜಾಪುರ ಜಿಲ್ಲೆಯಲ್ಲಿ ಸದರೀ ವರ್ಷದಲ್ಲಿ ಕಲಾದಗಿಯಲ್ಲಿ ದೊಡ್ಡ ಸಿವಿಲ್ ಆಸಪತ್ರಿ ಇತ್ತು. ಅದರ ಹೊರ್ತು ಇಲಕಲ್ಲು, ಬಾಗಲಕೋಟೆ, ವಿಜಾಪುರ, ಮುದ್ದೇಬಿಹಾಳ, ಬಾಗೇವಾಡಿ, ಸಿಂದಗಿ, ಈ ಗ್ರಾಮಗಳಲ್ಲಿ ವೊಂದೊಂದು ಸಣ್ಣ ಆಸಪತ್ರಿಗಳು (ಡಿಸ್ಪೆನ್ಸರಿಗಳು) ಇದ್ದವು. ಇವು ಕ್ರಮವಾಗಿ ಸನ್ ೧೮೭೩, ೧೮೬೭, ೧೮೭೧, ೧೮೭೮, ೧೮೭೯, ೧೮೮೨ ಈ ವರ್ಷಗಳಲ್ಲಿ ಆರಂಭವಾದವು. ಇವುಗಳಲ್ಲೆಲ್ಲ ಕೂಡಿ ಸದರೀ ವರ್ಷ (೧೮೮೨) ೨೩೪೨೫ ರೋಗಿಗಳಿಗೆ ಔಷಧೋಪಚಾರವಾಯಿತು. ಇವುಗಳ ಖರ್ಚು ಆ ವರ್ಷ ೧೦೬೦೦ ರೂಪಾಯಿ ಆಯಿತು.

ಕಾನಡಾ ಜಿಲ್ಲೆಯಲ್ಲಿ ಕಾರವಾಡದ ಸಿವಿಲ್ ಆಸಪತ್ರಿಯಲ್ಲದೆ ಕುಮಟಾ, ಹೊನ್ನಾವರ, ಸುಪೆ, ಹಲ್ಯಾಳ, ಯಲ್ಲಾಪುರ, ಶಿರಸಿ, ಸಿದ್ದಾಪುರ, ಮುಂಡಗೋಡ, ಈ ಗ್ರಾಮಗಳಲ್ಲಿ ಡಿಸ್ಪೇನ್ಸರಿಗಳಿದ್ದವು. ಹೊನ್ನಾವರದ ಆಸ್ಪತ್ರಿಯು ಸನ್ ೧೮೬೨ರ ಪೂರ್ವದಲ್ಲಿ

ಇತ್ತೆಂದು ತೋರುತ್ತದೆ. ಅದರ ಹೊರ್ತು ಉಳಿದ ಡಿಸ್ಪೆನ್ಸರಿಗಳು ಸನ್ ೧೮೬೨, ೧೮೬೬, ೧೮೬೫, ೧೮೬೩, ೧೮೬೪, ೧೮೭೩, ೧೮೬೪, ಈ ವರ್ಷಗಳಲ್ಲಿ ಆರಂಭವಾದವು. ಇವುಗಳಲ್ಲೆಲ್ಲ ಕೂಡಿ ಸನ್ ೧೮೮೨ನೇ ವರ್ಷ ೩೪೬೯೦ ರೋಗಿಗಳಿಗೆ ಔಷಧೋಪಚಾರವಾಯಿತು. ಇವುಗಳ ಖರ್ಚು ಆ ವರ್ಷ ೨೧೯೮೦ ರೂಪಾಯಿ ಆಯಿತು.

**ಭ್ರಮಿಷ್ಟರು.**—ಧಾರವಾಡದಲ್ಲಿ ಭ್ರಮಿಷ್ಟರ ದವಾಖಾನೆಯುಂಟು. ಅದರಲ್ಲಿ ಸನ್ ೧೮೮೩ನೇ ವರ್ಷದ ಆರಂಭದಲ್ಲಿ ೧೭ ಜನ ಭ್ರಮಿಷ್ಟರಿದ್ದರು; ಆ ವರ್ಷದಲ್ಲಿ ೭ ಜನ ಹೊಸಬರು ಬಂದರು. ಅಂತೂ ೨೪ ಜನರಲ್ಲಿ ೪ ಜನರು ನೆಟ್ಟಗಾಗಿ ಮನೆಗೆ ಹೋದರು, ಇಬ್ಬರು ಸತ್ತರು; ವರ್ಷದ ಕಡೆಯಲ್ಲಿ ೧೮ ಜನರು ಉಳಿದರು.

**ಊನರೂ ಮಹಾ ರೋಗಿಗಳೂ.**—ಸನ್ ೧೮೮೧ರ ಖಾನೆಸುಮಾರಿಯಲ್ಲಿ ಸಮೂದಾದ ಕುರುಡರು, ಮೂಕರು, ಭ್ರಮಿಷ್ಟರು, ಗಿರಣಿ ರೋಗದವರು, ಈ ನಾಲ್ಕು ಪ್ರಕಾರದ ದುರ್ಬಲ ಜನರ ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ತೋರಿಸಿದ್ದೇವೆ.

### ಊನರೂ ಮಹಾ ರೋಗಿಗಳೂ,— ೧೮೮೧.

| ಜಿಲ್ಲೆಗಳು. | ಭ್ರಮಿಷ್ಟರು. | ಕುರುಡರು. | ಮೂಕರೂ ಕಿವುಡರೂ. | ಗಿರಣಿ ರೋಗದವರು. | ಒಟ್ಟು. | ಶೇಕಡಾ. |
|---|---|---|---|---|---|---|
| ಧಾರವಾಡ ...... | ೧೩೦ | ೮೧೦ | ೫೮೪ | ೧೬೨ | ೧೬೮೬ | ೦·೧೯ |
| ಬೆಳಗಾವಿ....... | ೧೫೧ | ೧೧೮೬ | ೫೭೩ | ೨೮೯ | ೨೧೯೯ | ೦·೨೫ |
| ವಿಜಾಪುರ ...... | ೬೧ | ೭೯೯ | ೩೬೬ | ೧೯೦ | ೧೪೧೬ | ೦·೨೨ |
| ಕಾನಡಾ ....... | ೯೮ | ೩೨೦ | ೩೫೯ | ೫೪ | ೮೩೧ | ೦·೧೯ |
| ಒಟ್ಟು ........ | ೪೪೦ | ೩೧೧೫ | ೧೮೮೨ | ೬೯೫ | ೬೧೩೨ | ೦·೨೧ |

**ವೈಲೆ ತೆಗಿಸಿದ್ದು.**—ಸನ್ ೧೮೮೩ರಲ್ಲಿ ಧಾರವಾಡ, ಬೆಳಗಾವಿ, ವಿಜಾಪುರ, ಕಾನಡಾ ಜಿಲ್ಲೆಗಳಲ್ಲಿ ಕ್ರಮವಾಗಿ ೧೮, ೧೨, ೯, ೧೨ ಜನ ವೈಲೆ ತೆಗಿಯುವ ಕಾಮದಾರರಿದ್ದರು. ಅವರ ವರ್ಷದ ಸಂಬಳದ ಖರ್ಚು ಪ್ರತಿ ವೊಂದು ಜಿಲ್ಲೆಯಲ್ಲಿ ೨೮ ರೂಪಾಯಿ ಇತ್ತು. ಈ ಕಾಮದಾರರು ತಮ್ಮ ತಮ್ಮ ಜಿಲ್ಲೆಯಲ್ಲಿ ವೈಲೆ ತೆಗಿದದ್ದಲ್ಲದೆ,

ಹಾವೇರಿ, ಬೆಳಗಾವಿಯ ತುರಂಗ, ಚಿಕ್ಕೋಡಿ, ಗೋಕಾವಿ, ಸವದತ್ತಿ, ಅಥಣಿ, ವಿಜಾಪುರ, ಇಲಕಲ್ಲು, ಮುದ್ದೇಬಿಹಾಳ, ಬಾಗೇವಾಡಿ, ಸಿಂದಗಿ, ಈ ಸ್ಥಳಗಳಲ್ಲಿಯೂ ಕಾನಡಾ ಜಿಲ್ಲೆಯ ಆಸಪತ್ರಿಗಳಲ್ಲಿಯೂ ಇರುವ ಡಾಕ್ತರರು ಸಹ ಮೈಲಿ ತೆಗಿದರು. ಇವರೆಲ್ಲರೂ ಕೂಡಿ ವೊಟ್ಟಿಗೆ ಮೈಲಿ ತೆಗಿದದ್ದರ ವಿವರ ಹ್ಯಾಗಂದರೆ—ಧಾರವಾಡ ಜಿಲ್ಲೆಯಲ್ಲಿ ಮೊದಲಿಗೆ ಮೈಲೀ ತೆಗಿಸಿಕೊಂಡವರು ೨೮೪೩೦ (೧೪೬೨೪ ಗಂಡು, ೧೩೮೦೬ ಹೆಣ್ಣು), ಯೆರಡನೇ ಸಾರಿ ತೆಗಿಸಿ ಕೊಂಡವರು ೭೩೮; ಬೆಳಗಾವೀ ಜಿಲ್ಲೆಯಲ್ಲಿ ಮೊದಲಿಗೆ ತೆಗಿಸಿ ಕೊಂಡವರು ೨೯೨೦೦ (೧೪೭೮೨ ಗಂಡು, ೧೪೪೧೮ ಹೆಣ್ಣು), ಯೆರಡನೇ ಸಾರಿ ತೆಗಿಸಿ ಕೊಂಡವರು ೧೭೫೩; ವಿಜಾಪುರ ಜಿಲ್ಲೆಯಲ್ಲಿ ಮೊದಲಿಗೆ ತೆಗಿಸಿ ಕೊಂಡವರು ೨೧೮೩೦ (೧೦೯೧೨ ಗಂಡು, ೧೦೯೧೮ ಹೆಣ್ಣು), ಯೆರಡನೇ ಸಾರಿ ತೆಗಿಸಿ ಕೊಂಡವರು ೧೨೦೩೪ (೬೩೬೮ ಗಂಡು, ೫೬೬೬ ಹೆಣ್ಣು), ಯೆರಡನೇ ಸಾರಿ ತೆಗಿಸಿ ಕೊಂಡವರು ೬೩೨. ಸನ್ ೧೮೬೯-೭೦ರಲ್ಲಿ ನಾಲ್ಕೂ ಜಿಲ್ಲೆಗಳಲ್ಲಿ ಮೇಲಿನ ಕ್ರಮದಂತೆ ೧೩೨೪೪, ೧೦೩೪೧, ೧೯೮೬, ೬೫೭೯ ಜನರು ಮೊದಲಿನ ಮೈಲೀ ತೆಗಿಸಿ ಕೊಂಡಿದ್ದರು.

ಜನನ ಮರಣಗಳು.—ಸ್ಯಾನಿಟರೀ ಕಮ್ಮಿಶನರರ ವಾರ್ಷಿಕ ರಿಪೋರ್ಟು ಗಳ ಆಧಾರದಿಂದ ಸನ್ ೧೮೮೪ರ ಹಿಂದಿನ ೧೮ ವರ್ಷಗಳಲ್ಲಿ, ಅಂದರೆ ಸನ್ ೧೮೬೬ ರಿಂದ ೧೮೮೩ರ ವರೆಗೆ, ಮರಣದ ಸಂಖ್ಯೆಗಳನ್ನೂ, ಆ ವರ್ಷದ ಹಿಂದಿನ ೧೧ ವರ್ಷಗಳಲ್ಲಿ, ಅಂದರೆ ಸನ್ ೧೮೭೧ರಿಂದ ೧೮೮೩ರ ವರೆಗೆ, ಜನನದ ಸಂಖ್ಯೆಗಳನ್ನೂ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದ್ದೇವೆ. ಕಾನಡಾ ಜಿಲ್ಲೆಯ ಮರಣ ಜನನಗಳ ಸಂಖ್ಯೆಗಳು ಯಥಾ ಕ್ರಮವಾಗಿ ಸನ್ ೧೮೬೬, ೧೮೭೧ ಈ ವರ್ಷಗಳಿಂದ ಆರಂಭ ಮಾಡಿ ಕೊಂಡು ಸನ್ ೧೮೮೨ರ ಅಖೈರ ವರೆಗೆ ಮಾತ್ರ ಇರುತ್ತವೆ.

# ಜನನ ಮರಣಗಳು.

## ಜನನ.

| ಜನನ. | ಧಾರವಾಡ. | ಬೆಳಗಾವಿ. | ವಿಜಾಪುರ. | ಕಾನಡಾ. | ಒಟ್ಟು. |
|---|---|---|---|---|---|
| ಜನನ....... | ೧೮೭೧-೧೮೮೩ | ೧೮೭೧-೧೮೮೩ | ೧೮೭೧-೧೮೮೩ | ೧೮೭೧-೧೮೮೨ | (೧೩ ವರ್ಷವು.) |
| ಒಟ್ಟು ...... | ೩೫೩೫೫೮ | ೩೧೩೦೫೫ | ೧೮೯೭೪೩ | ೧೩೮೦೯೬ | ೯೯೪೪೫೨ |
| ಸರಾಸರೀ .... | ೨೭೧೯೭ | ೨೪೦೮೧ | ೧೪೫೯೬ | ೧೧೫೦೮ | ೭೭೩೮೨ |

## ಮರಣ.

| ಮರಣ. | ಧಾರವಾಡ. | ಬೆಳಗಾವಿ. | ವಿಜಾಪುರ. | ಕಾನಡಾ. | ಒಟ್ಟು. |
|---|---|---|---|---|---|
| ಮರಣ …… | ೧೮೬೬-೧೮೮೩ | ೧೮೬೬-೧೮೮೩ | ೧೮೬೬-೧೮೮೩ | ೧೮೬೬-೧೮೮೨ | (೧೮ ವರ್ಷಪ್ಪು) |
| **ಪಟಕಿ.** | | | | | |
| ಒಟ್ಟು …… | ೩೪೦೪೫ | ೩೫೦೭೫ | ೨೮೯೪೩ | ೫೩೯೦ | ೧೦೩೪೫೨ |
| ಸರಾಸರಿ ….. | ೧೮೯೧ | ೧೯೪೮ | ೧೬೦೮ | ೩೧೭ | ೫೭೬೪ |
| **ಮೈಲಿ.** | | | | | |
| ಒಟ್ಟು …… | ೩೩೩೭೭ | ೧೦೫೭೪ | ೮೦೯೭ | ೪೦೨೧ | ೫೬೦೬೯ |
| ಸರಾಸರಿ ….. | ೭೪೩ | ೫೮೭ | ೪೫೦ | ೨೩೭ | ೨೦೧೭ |
| **ಜ್ವರ.** | | | | | |
| ಒಟ್ಟು …… | ೨೪೧೨೪೩ | ೧೯೭೬೪೧ | ೧೭೯೯೪೨ | ೧೧೨೨೯೫ | ೭೩೧೧೨೨ |
| ಸರಾಸರಿ ….. | ೧೩೪೦೧ | ೧೦೯೮೦ | ೯೯೯೭ | ೬೬೦೬ | ೪೦೯೮೪ |
| **ಅತಿಸಾರ.** | | | | | |
| ಒಟ್ಟು …… | ೭೬೬೬೬ | ೩೭೮೭೮ | ೨೮೦೦೨ | ೧೬೧೬೦ | ೧೫೮೭೦೬ |
| ಸರಾಸರಿ ….. | ೪೨೫೯ | ೨೧೦೪ | ೧೫೫೬ | ೯೫೦ | ೮೮೬೯ |
| **ಅಪಘಾತ.** | | | | | |
| ಒಟ್ಟು …… | ೬೨೫೧ | ೫೪೦೫ | ೪೯೯೦ | ೩೭೨೩ | ೨೦೩೬೯ |
| ಸರಾಸರಿ ….. | ೩೪೬ | ೩೦೦ | ೨೭೭ | ೨೧೯ | ೧೧೪೨ |
| **ಅನ್ಯಕಾರಣಗಳು.** | | | | | |
| ಒಟ್ಟು …… | ೧೦೩೪೫೩ | ೧೩೪೩೯೩ | ೭೮೧೬೭ | ೫೩೬೭೦ | ೩೬೯೬೮೩ |
| ಸರಾಸರಿ ….. | ೫೭೪೭ | ೭೪೬೬ | ೪೩೪೨ | ೩೧೫೭ | ೨೦೭೧೮ |
| **ಜುಮುಲು.** | | | | | |
| ಒಟ್ಟು …… | ೪೭೫೦೩೫ | ೪೨೦೯೬೫ | ೩೨೮೧೪೨ | ೧೯೫೨೫೯ | ೧೪೧೯೪೦೧ |
| ಸರಾಸರಿ ….. | ೨೬೩೯೧ | ೨೩೩೮೭ | ೧೮೨೩೦ | ೧೧೪೮೬ | ೭೯೪೯೪ |

ಜನನದ ಸಂಖ್ಯೆಗಳು ಪೂರಾ ದಾಖಲಾಗಿಲ್ಲ; ಮರಣದ ಸಂಖ್ಯೆಗಳು ಸಾಧಾರಣವಾಗಿ ಸರಿ ಇರುತ್ತವೆಂದೆನ್ನ ಬಹುದು. ಸನ್ ೧೮೭೭, ೧೮೭೮, ಈ ಯೆರಡು ಬರಗಾಲದ ವರ್ಷಗಳಲ್ಲಿ ಬಹು ಜನ ಸತ್ತದ್ದರಿಂದ ಈ ಯೆರಡು ವರ್ಷಗಳಲ್ಲಿ ಜ್ವರ, ಪಟಕಿ, ಈ ಯೆರಡೇ ರೋಗಗಳಿಂದ ನಾಲ್ಕೂ ಜಿಲ್ಲೆಗಳಲ್ಲಿ ಕೂಡಿ ೨೩೦೦೦೦ಕ್ಕಿಂತ ಹೆಚ್ಚು ಜನ ಸತ್ತಿತು. ಈ ಸಂಖ್ಯೆ ಬಿಟ್ಟು ಸ್ವಾಭಾವಿಕವಾದ ಮರಣದ ಸರಾಸರಿಯು ಸುಮಾರು ೭೪೦೦೦ ಹೊರಡುತ್ತದೆ. ಒಟ್ಟು ಮರಣದ ಸರಾಸರಿಯು ಜನನದ ಸರಾಸರಿಗಿಂತ ಹೆಚ್ಚಾಗಿವೆ.